ಎಂವಿಸಿ 265/2020 ಪಿಡಬ್ಲ್ಯೂ 1 ಅತೀಕ್

ಸಾಕ್ಷಿಯನ್ನು ದಿನಾಂಕ 20-09-2022 ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀಸವಾಲು:** 2 ನೇ ಎದುರುದಾರರ ಪರ ಶ್ರೀ ಎಂ.ಎಸ್.ವಿ. ವಕೀಲರಿಂದಃ

ಅಪಘಾತದ ದಿನ ನಾನು ಕಲ್ಯಾಣಗಿರಿಯಿಂದ ಮೀನಾ ಬಜಾರ್ ಗೆ ಹೋಗುತಿದ್ದೆ. ಕಲ್ಯಾಣಗಿರಿಯಿಂದ ಮಹದೇವಪುರ ಮುಖ್ಯರಸ್ತೆಯಲ್ಲಿರವ ಸಿಗ್ನಲ್ ಗೆ ಸುಮಾರು 2 ಕಿ.ಮೀ. ದೂರ ಆಗುತ್ತದೆ. ನನಗೆ ಚಾಲನಾ ಪರವಾನಗಿ ಇದೆ. ಅದನ್ನು ನ್ಯಾಯಾಲಯಕ್ಕೆ ಹಾಜರು ಮಾಡಿಲ್ಲ. ಅಪಘಾತದ ದಿನ ನಾನು ಚಾಲನೆ ಮಾಡುತಿದ್ದ ಬೈಕಿಗೆ ವಿಮೆ ಚಾಲ್ತಿಯಲ್ಲಿರುವ ಬಗ್ಗೆ ನನಗೆ ಗೊತ್ತಿಲ್ಲ. ಬೈಕಿನಲ್ಲಿ ನಾನು, ನನ್ನ ಹೆಂಡತಿ ಮತ್ತು ನನ್ನ ಮಗು ಹೋಗುತಿದ್ದೆವು. ಮಗುವಿಗೆ 7 ವರ್ಷ. ಮನೆಯಿಂದ ರಾತ್ರಿ ಸುಮಾರು 8.00 ಗಂಟೆಗೆ ಹೊರಟಿರುತ್ತೇವೆ. 2 ಕಿ.ಮೀ. ಬೈಕನ್ನು ಚಾಲನೆ ಮಾಡಲು ಸುಮಾರು 10 ನಿಮಿಷ ಆಗುತ್ತದೆ. ನನಗೆ ಅಪಘಾತ ರಾತ್ರಿ 8 ರಿಂದ 8.15 ರ ಸುಮಾರಿನಲ್ಲಿ ಆಗಿರುತ್ತದೆ. ನನಗೆ ಅಪಘಾತಪಡಿಸಿದವರು ಯಾರು ಎಂದು ನನಗೆ ಗೊತ್ತಾಗಲಿಲ್ಲ. ನಾನು ಗುಣಮುಖನಾದ ನಂತರ ಪೊಲೀಸರು ಹಾಕಿರುವ ದೋಷಾರೋಪಣೆ ಪಟ್ಟಿಯನ್ನು ನೋಡಿಲ್ಲ. ನನಗೆ ಅಪಘಾತ ಪಡಿಸಿದ ವಾಹನದ ಮಾಲೀಕರನ್ನು ಪಕ್ಷಗಾರನನ್ನಾಗಿ ಮಾಡಲು ತೊಂದರೆ ಇತ್ತಾ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದೂರನ್ನು ದಿನಾಂಕ 07.01.2021 ರಂದು ಕೊಟ್ಟಿರುತ್ತೇನೆ. ಅಪಘಾತವನ್ನು ಯಾರು ನೋಡಿದರು ಎಂದು ನನಗೆ ಗೊತ್ತಿಲ್ಲ. ಅಪಘಾತವಾದ ನಂತರ ಮೊದಲು ನನ್ನನ್ನು ಅಲ್-ಅನ್ಸರ್ ಆಸ್ಪತ್ರೆಗೆ ಕರೆದುಕೊಂಡು ಹೋದರು. ಸದರಿ ಆಸ್ಪತ್ರೆಯಲ್ಲಿ ನಾನು 4 ದಿನ ಒಳರೋಗಿಯಾಗಿ ಚಿಕಿತ್ಸೆ ಪಡೆದುಕೊಂಡಿರುತ್ತೇನೆ. ನಾನು ಪುನಃ ಶಸ್ತ್ರಚಿಕಿತ್ಸೆ ಮಾಡಿಸಿಕೊಂಡಿರುತ್ತೇನೆ. ಆಗ ನಾನು 7 ದಿನ ಒಳರೋಗಿಯಾಗಿ ದಾಖಲಾಗಿದ್ದೆ. ಅಪಘಾತದಲ್ಲಿ ಕಾಲಿಗೆ ಹೊರತುಪಡಿಸಿ ದೇಹದ ಬೇರೆ ಭಾಗಗಳಿಗೆ ನನಗೆ ಪೆಟ್ಟಾಗಿಲ್ಲ. ನಾನು ಹೇಳಿದಂತೆ 1 ನೇ ಎದುರದಾರರಿಂದ ನನಗೆ ಅಪಘಾತ ಆಗಿಲ್ಲ ಎಂದರೆ ಸುಳ್ಳು. ವಾಹನದ ಚಾಲಕನನ್ನು ಪಕ್ಷಗಾರರನ್ನಾಗಿ ಮಾಡಲು ಯಾವುದೇ ತೊಂದರೆ ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ.

3. 1 ನೇ ಎದುರುದಾರ ಹೆಚ್.ಎನ್.ಅಬೀಬ್ ಖಾನ್ ನನಗೆ ಗೊತ್ತಿಲ್ಲ. ನಾನು ಅವರ ಮಾಹಿತಿಯನ್ನು ಎಲ್ಲಿಯೂ ಪಡೆದುಕೊಂಡಿಲ್ಲ. 1 ನೇ ಎದುರುದಾರ ಅಪಘಾತಪಡಿಸಿದ ವಾಹನದ ಮಾಲೀಕನಲ್ಲ ಎಂದರೆ ನನಗೆ ಗೊತ್ತಿಲ್ಲ. ಅಪಘಾತಪಡಿಸಿದ ವಾಹನಕ್ಕೆ ವಿಮಾ ಪಾಲಿಸಿ ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ವಿಮೆ ಇಲ್ಲದೇ ಇದ್ದರೂ ಕೂಡಾ ಅರ್ಜಿಯಲ್ಲಿ ಪಾಲಿಸಿ ನಂಬರ್ ಮತ್ತು ದಿನಾಂಕಗಳನ್ನು ಸೃಷ್ಟಿಸಿ ಬರೆದಿರುತ್ತೇವೆ ಎಂದರೆ ಸರಿಯಲ್ಲ. ನಾನು ಅರ್ಜಿಯಲ್ಲಿ ನಮೂದಿಸಿರುವ ಪಾಲಿಸಿ ಈಗ ಚಾಲ್ತಿಯಲ್ಲಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ನನ್ನ ಔಷದೋಪಚಾರಕ್ಕೆಂದು 2

ಲಕ್ಷ ಖರ್ಚು ಮಾಡಿದ್ದೇನೆ ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ನಾನು ಈಗಾಗಲೇ ನನಗೆ ಶಸ್ತ್ರಚಿಕಿತ್ಸೆ ಆಗಿರುವುದರಿಂದ ಪುನಃ ಶಸ್ತ್ರಚಿಕಿತ್ಸೆಯ ಅಗತ್ಯ ಇಲ್ಲ ಎಂದರೆ ಸುಳ್ಳು. ನನಗೆ ಈಗಾಗಲೇ 2 ಬಾರಿ ಶಸ್ತ್ರಚಿಕಿತ್ಸೆ ಮಾಡಿಸಿದ್ದೇನೆ ಎಂದರೆ ಸರಿ. ಪುನಃ ಶಸ್ತ್ರಚಿಕಿತ್ಸೆ ಮಾಡಿಸಬೇಕೆಂದು ವೈದ್ಯರು ದಾಖಲೆ ನೀಡಿಲ್ಲ ಎಂದರೆ ಸುಳ್ಳು. ಅದನ್ನು ಹಾಜರು ಮಾಡಲು ತೊಂದರೆ ಇಲ್ಲ. ಕಾರು ಬಾಡಿಗೆಗೆ 20 ಸಾವಿರ ಖರ್ಚು ಮಾಡಿದ ಬಗ್ಗೆ ದಾಖಲೆ ಇರುವುದಿಲ್ಲ. ಅದೇರೀತಿ ವಾಹನ ರಿಪೇರಿ ಮಾಡಿಸಿದ ಬಗ್ಗೆ ಕೊಟ್ಟ ಬಿಲ್ಲನ್ನು ಹಾಜರು ಮಾಡಿಲ್ಲ. ನಾನು 50 ಸಾವಿರ ಹಣವನ್ನು ಪೌಷ್ಟಿಕ ಆಹಾರಕ್ಕೆ ಖರ್ಚು ಮಾಡಿಲ್ಲ ಎಂದರೆ ಸರಿಯಲ್ಲ. ಅಪಘಾತಕ್ಕಿಂತ ಮುಂಚೆ ನಾನು ಬಟ್ಟೆ ವ್ಯಾಪಾರ ಮಾಡುತಿದ್ದೆ. ನಾನು ಫುಟ್ ಪಾತ್ ನಲ್ಲಿ ಬಟ್ಟೆ ವ್ಯಾಪಾರ ಮಾಡುತಿದ್ದೆ. ತಿಂಗಳಿಗೆ 18 ರಿಂದ 20 ಸಾವಿರ ಸಂಪಾದನೆ ಮಾಡುತಿದ್ದೆ. ನಾನು ಆದಾಯ ತೆರಿಗೆ ಪಾವತಿದಾರನಿರುವುದಿಲ್ಲ. ನಾನು 18 ರಿಂದ 20 ಸಾವಿರ ಸಂಪಾದನೆ ಮಾಡುತ್ತಿರಲಿಲ್ಲ ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ಅಪಘಾತದಿಂದ ಆದ ಗಾಯದಿಂದ ಗುಣಮುಖನಾಗಿರುತ್ತೇನೆ ಎಂದರೆ ಸುಳ್ಳು. ಚಾಲ್ತಿಯಲ್ಲಿಲ್ಲದ ಪಾಲಿಸಿ ನಂಬರನ್ನು ಅರ್ಜಿಯಲ್ಲಿ ನಮೂದಿಸಿ ಅರ್ಜಿ ಸಲ್ಲಿಸಿರುವುದರಿಂದ 2 ನೇ ಎದುರುದಾರರು ಪರಿಹಾರ ಕೊಡಲು ಬಾದ್ಯಸ್ಥರಲ್ಲ ಎಂದರೆ ನನಗೆ ಗೊತ್ತಿಲ್ಲ.

**<u>ಮರುವಿಚಾರಣೆಃ</u>** ಇಲ್ಲ.

ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಈ ದಿನ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸ ಇ

ಅಪರ ಹಿರಿಯ ಸಿಜೆ ಮತ್ತು ಎಂಎಸಿಟಿ, ಶ್ರೀರಂಗಪಟ್ಟಣ